**ನಾಂದಿಪದ**

# ಕನ್ನಡದ ವಿವೇಕ ಪರಂಪರೆಗೆ ಕನ್ನಡಿ



ಕಲೆ: ಪುಂಡಲೀಕ ಕಲ್ಲಿಗನೂರು

**ಮಯೂರದ** ಫೆಬ್ರುವರಿ ಸಂಚಿಕೆ ಕಥೆ-ಕವಿತೆಗಳ ಆಕರ್ಷಕ ಕಟಾವಿನೊಂದಿಗೆ ಕನ್ನಡ ಸಾಹಿತ್ಯದ ವಿವೇಕ ಪರಂಪರೆಯನ್ನು ನೆನಪಿಸುವ ಪ್ರಯತ್ನವೂ ಆಗಿದೆ. ಈ ಸಂಚಿಕೆಯಲ್ಲಿ ಸಮಕಾಲೀನ ಬರಹಗಾರರೊಂದಿಗೆ ಕಾಣಿಸಿಕೊಂಡಿರುವ ಕುಮಾರವ್ಯಾಸ, ದ.ರಾ. ಬೇಂದ್ರೆ, ಶಿವರಾಮ ಕಾರಂತ ಹಾಗೂ ಗೌರೀಶ ಕಾಯ್ಕಿಣಿ ಅವರ ಹೆಸರುಗಳು 'ಕನ್ನಡ ಸಾಹಿತ್ಯ ಪರಂಪರೆ'ಯ ಸಾತತ್ಯವನ್ನು ಸೂಚಿಸುವಂತಿವೆ. ಯಾವುದೇ ಸಾಹಿತ್ಯ ಪರಂಪರೆ, ನಾಡು-ನುಡಿಯ ಘನತೆ ಮತ್ತು ವಿವೇಕದ ಅಭಿವ್ಯಕ್ತಿಯಾಗಿರುತ್ತದೆ. ಕನ್ನಡ ಸಾಹಿತ್ಯ ಪರಂಪರೆಯಂತೂ ಲೋಕವಿವೇಕವನ್ನು ವ್ಯಾಖ್ಯಾನಿಸುವ ಹಾಗೂ ತಿದ್ದುವ ಕೆಲಸವನ್ನು ನಿರಂತರವಾಗಿ ಹಾಗೂ ಪ್ರಜ್ಞಾಪೂರ್ವಕವಾಗಿ ಮಾಡುತ್ತಾ ಬಂದಿದೆ. ಸಾಹಿತ್ಯದಲ್ಲಿ ರುಚಿಯಂತೆ ಶುಚಿಯೂ ಬೇಕು ಎನ್ನುವ ಶಿವರಾಮ ಕಾರಂತರ ಮಾತು- ಎಲ್ಲ ಕಾಲಕ್ಕೂ ಒಪ್ಪುವಂಥ ಮಾತು- ಈ ಕಾಲಕ್ಕೆ ಹೆಚ್ಚು ಅನ್ವಯಿಸುವಂತೆ ಕಾಣಿಸುತ್ತಿದೆ ಹಾಗೂ ಈ ತಿಳಿವು 'ಕನ್ನಡ ವಿವೇಕ ಪರಂಪರೆ'ಯ ಮುಖ್ಯವಾದ ಭಾಗವಾಗಿದೆ. ಕಾರಂತರ ಲೇಖನ, ಓದು ಮತ್ತು ಬರವಣಿಗೆಯ ಬಗ್ಗೆ ಪ್ರೀತಿ ಹಾಗೂ ಕಾಳಜಿಯುಳ್ಳ ಎಲ್ಲರೂ ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಾದ ಕಿವಿಮಾತುಗಳನ್ನು ಒಳಗೊಂಡಿದೆ. ಗೌರೀಶ ಕಾಯ್ಕಿಣಿಯವರ ಸಮಗ್ರ ಸಾಹಿತ್ಯ ಸಂಪುಟಗಳ ಕುರಿತಾದ ಬರಹ, ಈ ತಲೆಮಾರಿನ ಕಿರಿಯರಿಗೆ ಕನ್ನಡದ ಘನ ವ್ಯಕ್ತಿತ್ವವೊಂದನ್ನು ಪರಿಚಯಿಸುವ ಪ್ರಯತ್ನವಾಗಿದೆ. ಗೌರೀಶ ಕಾಯ್ಕಿಣಿ ತಮ್ಮ ವಿಶಿಷ್ಟ ಚಿಂತನೆ ಮತ್ತು ಬರಹಗಳ ಮೂಲಕ 'ಕನ್ನಡ ವಿವೇಕ ಪರಂಪರೆ'ಯನ್ನು ಶ್ರೀಮಂತಗೊಳಿಸಿದವರು. ಈಗ ಲಭ್ಯವಿರುವ ಅವರ ಸಮಗ್ರ ಬರಹಗಳನ್ನು ಓದುಗರು ಸಂಭ್ರಮದಿಂದ ಸ್ವಾಗತಿಸಬೇಕಾಗಿದೆ. ಗೌರೀಶರಂಥ ಬರಹಗಾರರು ಭಾಷೆಗೆ ಅಂತರ್ಜಲದಂತೆ ಪರಿಣಮಿಸುವವರು. ಅಂಥ ಉದ್ದಾಮ ಬರಹಗಾರರನ್ನು ಸದಾ ಕಾಲ ಜೀವಂತವಾಗಿರಿಸಿಕೊಳ್ಳುವುದು ನಾಡು-ನುಡಿಯ ಆರೋಗ್ಯಕ್ಕೆ ಅಗತ್ಯ.

'ಬೇಂದ್ರೆ ಬರೆಯದ ಪುಸ್ತಕಗಳು' ಈ ಸಂಚಿಕೆಯಲ್ಲಿನ ಮತ್ತೊಂದು ವಿಶೇಷ ಲೇಖನ. ಬರಹಗಾರನೊಬ್ಬ ಬರೆಯದ ಪುಸ್ತಕಗಳೂ ಇರುತ್ತವೆಯೇ ಎನ್ನುವ ಪ್ರಶ್ನೆಯ ಬೆನ್ನತ್ತಿರುವ ಈ ಬರಹ, ಬೇಂದ್ರೆಯವರ ಮೂಲಕ ದಂತಕಥೆಯಂಥ ಸಾಹಿತಿಯೊಬ್ಬನ ಬರಹದ ಬದುಕಿನಲ್ಲಿನ ಸ್ವಾರಸ್ಯಕರ ಸಂಗತಿಗಳನ್ನು ಹುಡುಕುವ ಪ್ರಯತ್ನವಾಗಿದೆ; ಬೇಂದ್ರೆ ಹಾಗೂ ಅಂಬಿಕಾತನಯದತ್ತ ಹೇಗೆ ಭಿನ್ನ ಎಂದು ಹೇಳುತ್ತಲೇ, ಬೇಂದ್ರೆ ಬರೆಯದ ಅಥವಾ ಬರೆದೂ ಪ್ರಕಟಿಸದ ಕೃತಿಗಳ ಕುರಿತು ಗಮನಸೆಳೆಯುತ್ತದೆ. ಕನ್ನಡದ ಮಹತ್ವದ ಬರಹಗಾರರ ಬಗ್ಗೆ ಇಂಥ ಅಧ್ಯಯನಗಳು ನಡೆದರೆ, ಬರಹಗಾರರ ಮನೋವ್ಯಾಪಾರದ ಬಗ್ಗೆ ಓದುಗರಿಗೆ ಸಾಕಷ್ಟು ಕುತೂಹಲಕರ ಸಂಗತಿಗಳು ದೊರೆಯಬಹುದು.

'ಮಯೂರ'ದ ಜನವರಿ ಸಂಚಿಕೆಗೆ- ವಿಶೇಷವಾಗಿ ಕಾವ್ಯಪ್ರಯೋಗಗಳಿಗೆ- ಓದುಗರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಸಹೃದಯರ ಸ್ಪಂದನವೇ 'ಮಯೂರ'ದ ಪ್ರತಿ ಸಂಚಿಕೆಯೂ ಜೀವಂತಿಕೆಯಿಂದ ಕೂಡಿರಲು ಪ್ರೇರಣೆಯಾಗಿದೆ.

**ಮಯೂರ ಬಳಗ**

**editormy@mayura.co.in**